**ಸಾಕ್ಷಿಗೆ ದಿನಾಂಕ 01-02-2025ರಂದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ RTK ವಕೀಲರಿಂದ</u>**

ಸರಕಾರದವರು ನನಗೆ ಸೇರಿದ ಯಾತನೂರು ಗ್ರಾಮದ ಸ.ನಂ.145/ಅರಲ್ಲಿ 2 ಎಕರೆ 32 ಗುಂಟೆ ಸ್ವಾ ಧೀನಪಡಿಸಿಕೊಂಡಿರುತ್ತಾರೆ. ನಾನು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತೇನೆ. ನಾನು ಮಹಾರಾಷ್ಟ್ರದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಕಾರಣ ಯಾತನೂರು ಗ್ರಾಮದಲ್ಲಿ ವಾಸವಾಗಿಲ್ಲ ಎಂದರೆ ಸಾಕ್ಷಿ ನಮ್ಮ ಗ್ರಾಮದಲ್ಲಿ ಕಾಲುವೆಗಾಗಿ ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ನಮ್ಮ ಗ್ರಾಮ ಯಾತನೂರಿನಲ್ಲಿದ್ದೆ. ಸರಕಾರದವರು ಸ್ವಾಧೀನಪಡಿಸಿಕೊಂಡ ಜಮೀನಿಗೆ ಸೂಕ್ತ ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ದಿನಾಂಕ 05-01-2018 ರಂದು ಸಲ್ಲಿಸಿದ ಅರ್ಜಿ ಕಾಲಮಿತಿಯಲ್ಲಿ ಇಲ್ಲ ಎಂದರೆ ಸಾಕ್ಷಿ ಸರಕಾರದವರು ನಮಗೆ ನೋಟಿಸು ನೀಡಿಲ್ಲ ನಾವೇ ನಮ್ಮ ಅಕ್ಕಪಕ್ಕದ ಜಮೀನಿನವರಿಂದೆ ಕೇಳಿ ತಿಳಿದುಕೊಂಡು ಅರ್ಜಿ ಸಲ್ಲಿಸಿರುತ್ತೇವೆಂದು ನುಡಿಯುತ್ತಾರೆ. ವಿಶೇಷ ಭೂ-ಸ್ವಾಧೀನಾಧಿಕಾರಿಗಳು ನಮ್ಮ ಜಮೀನಿಗೆ ಬಂದಾಗ ನಾನು ಮಹಾರಾಷ್ಟ್ರದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಅಧಿಕಾರಿಗಳು ನಮ್ಮ ಸಂಬಂಧಿಕರಿಗೆ ನೋಟಿಸು ನೀಡಿರುತ್ತಾರೆಂದರೆ ಸರಿಯಲ್ಲ.

**<u>2ನೇ ಎದುರುದಾರರ ಪರ ವಕೀಲರು ಗೈರುಹಾಜರಾದ ಕಾರಣ ಪಾಟೀಸವಾಲಿಗೆ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,ಜೇವರ್ಗಿ